ಕಿರುನಗೆ ಬೀರಿ ನನ್ನತ್ತ ನೋಡುತ್ತಾ ತಮ್ಮ ಮಾತನ್ನು ಮುಂದುವರೆಸಿದರು.

"ನನ್ನ ಫೀಜು, ತೆಗೆದುಕೊಂಡು ಉಳಿದದ್ದನ್ನು ಮನೆಯ ಜೊತೆಗೆ ನನ್ನ ಕರ್ಮಕಾಂಡ ಮಾಡಿದ ವ್ಯಕ್ತಿಗೆ ಸೇರಬೇಕು ಎಂದು ಉಯಿಲು ಬರೆದಿದ್ದಾರೆ." ಅವರು ಹೇಳುತ್ತಿದ್ದುದನ್ನು ಕೇಳಿ ನನಗೆ ಮಾತೇ ಬಾರದಂತಾಯಿತು. ದಿಗ್ಭ್ರಮೆಗೆ ಒಳಗಾದೆ. ಅನಂತರ ಚೇತರಿಸಿಕೊಂಡು ಹೇಳಿದೆ.

"ನಿಜಕ್ಕೂ ಹೀಗಾಗುತ್ತದೆ ಅಂತ ನಾನು ಅಂದುಕೊಂಡೇ ಇರಲಿಲ್ಲ. ಪಾಪ! ದಿಕ್ಕೂ ದೆಸೆ ಇಲ್ಲದೆ ರೈಲಿನಲ್ಲಿ ಜೀವಬಿಟ್ಟರಲ್ಲಾ ಅಂತ ಶವದ ಜೊತೆ ಬಂದೆನೇ ಹೊರತು..."

"ನಿಮಗೆ ತಿಳಿಯದೆಯೇ ಒಳ್ಳೆಯ ಕೆಲಸ ಮಾಡಿದ್ದೀರಿ. ಅವರ ಕೋರಿಕೆಯನ್ನು ನಿರಾಕರಿಸಬೇಡಿ. ಮುಂದೆ ನಡೆಯಬೇಕಾದುದನ್ನು ನಾನು ನೋಡಿಕೊಳ್ತೀನಿ. ಮನೆಯ ಬೀಗ ನಿಮ್ಮ ಬಳಿಯೇ ಇರಲಿ. ನಾನು ನಿಮ್ಮ ಸಂಪರ್ಕದಲ್ಲಿತ್ತೀರ್ನಿ. ನೀವು, ನಾನು, ಹೈದರಾಬಾದಿನಲ್ಲಿರುವ ಶೇಷು ಅವರ ಸ್ನೇಹಿತರು ಒಂದು ಕಮಿಟಿಮಾಡಿಕೊಂಡು ಅವರ ಕೋರಿಕೆಯಂತೆ ನಡೆದುಕೊಳ್ಳೋಣ..." ವಕೀಲರು ನಡುವೆಯೇ ಬಾಯಿಹಾಕಿ ಹೇಳಿದರು.

"ಆಗಲಿ... ಆದರೆ, ನನಗೆ ಯಾವುದೇ ಭಾಗದ ಅವಶ್ಯಕತೆ ಇಲ್ಲ..." ಎಂದೆ.

"ಈಗ ಬೇಡ, ಆ ವಿಷಯ ಆಮೇಲೆ ಆಲೋಚನೆ ಮಾಡೋಣ..."

ವಕೀಲರು ನನ್ನ ಸಂಪರ್ಕದಲ್ಲೇ ಇದ್ದರು. ಹೈದರಾಬಾದಿಗೂ ಒಂದೆರಡು ಸಲ ಬಂದು ಹೋದರು. ನಾನು ಮಾಡಿದ ಸಹಾಯಕ್ಕೆ ಅಭಿನಂದಿಸಿ, ಧನ್ಯವಾದಗಳನ್ನು ಸಲ್ಲಿಸಿದರು.

ಸ್ವಲ್ಪ ಸಮಯ ಹಿಡಿದರೂ, ಮೃತಶೇಷು ಅವರ ಉಯಿಲಿನ ಪ್ರಕಾರ ಎಲ್ಲವೂ ನಡೆಯಿತು.

ಅಷ್ಟರಲ್ಲಿ ನಾನೊಂದು ನಿರ್ಧಾರಕ್ಕೆ ಬಂದಿದ್ದೆ.

"ನನ್ನ ಪಾಲಿಗೆ ಬಂದ ಹಣದಿಂದ ಆ ಮನೆಯಲ್ಲಿ ಒಂದು ವೃದ್ಧಾಶ್ರಮವನ್ನು ನಡೆಸೋಣ ಅಂತಿದೀನಿ. ಅದಕ್ಕೆ ನಿಮ್ಮಿಬ್ಬರ ಸಹಕಾರ ಅತ್ಯಗತ್ಯವಾಗಿ ಬೇಕು." ನನ್ನ ನಿರ್ಧಾರವನ್ನು ಅವರಿಬ್ಬರ ಮುಂದಿಟ್ಟೆ.

"ತುಂಬಾ ಒಳ್ಳೆಯ ಆಲೋಚನೆ. ನಾನು ನನ್ನ ಕೇಸಿಗೆ ತೆಗೆದುಕೊಂಡಿದ್ದ ಫೀಜಿನ ಪೂರ್ಣ ಹಣವನ್ನು ನಿಮ್ಮ ವೃದ್ಧಾಶ್ರಮಕ್ಕೆ ಡೊನೇಟ್ ಮಾಡ್ತಿದೀನಿ..." ಎಂದರು ವಕೀಲರು.

"ನನಗಷ್ಟೊಂದು ಶಕ್ತಿಯಿಲ್ಲ. ನನ್ನನ್ನೇ ನಾನು ಡೊನೇಟ್ ಮಾಡ್ತೀನಪ್ಪ..." ಹೈದರಾಬಾದಿನ ಸ್ನೇಹಿತರು ನಗುತ್ತಾ ಹೇಳಿದರು.

### ಅಂಗರ ವೆಂಕಟ ಶಿವಪ್ರಸಾದ ರಾವು

ಆಂಧ್ರ ಪ್ರದೇಶದ ವೈಜಾಗ್ ಲೇಖಕರ ಹುಟ್ಟೂರು. ತೆಲುಗಿನಲ್ಲಿ ಸುಮಾರು 100ಕ್ಕೂ ಹೆಚ್ಚು ಕತೆಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ವಿಶಾಖಪಟ್ಟಣದಲ್ಲಿ ನೆಲೆಸಿದ್ದಾರೆ.

### ವಿಜಯಾಶಂಕರ

ಅನುವಾದಕಿ ಮೈಸೂರಿನಲ್ಲಿ ನೆಲೆಸಿರುವ ನಿವೃತ್ತ ಉಪನ್ಯಾಸಕಿ. ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. 'ಇದು ಯಾವ ನ್ಯಾಯ', 'ಸ್ವರ್ಣಖಡ್ಗ', 'ಮಾನಸ ಸರೋವರಕ್ಕೆ ಪ್ರೇಮಯಾನ', 'ಕೈದಿ' ಕಾದಂಬರಿಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿವೆ. 'ತಾಯಿ' ಕತೆ ಟೀವಿ ಧಾರಾವಾಹಿಯಾಗಿ, ಸಣ್ಣಕತೆಗಳು 'ಪ್ರೀತಿಪ್ರೇಮ' ಟೀವಿ ಧಾರಾವಾಹಿ ಸರಣಿಯಲ್ಲಿ ಪ್ರಸಾರವಾಗಿವೆ.